2. ರಫ್ತು ಉತ್ತೇಜನ ಕಾರ್ಯ ನಿರ್ವಹಣೆಯಲ್ಲಿ ಪೂರಕ ಸಂಘ–ಸಂಸ್ಥೆಗಳಿಗೆ ಸಲಹೆ ಮಾರ್ಗದರ್ಶನ ಹಾಗೂ ಆರ್ಥಿಕ ನೆರವು ನೀಡುವುದು.

3. ಕೊಯ್ಲು ನಂತರ ತಂತ್ರಜ್ಞಾನ ತರಬೇತಿ ನೀಡಿ ರಫ್ತಿಗೆ ಉತ್ತೇಜನ ನೀಡುವುದು.

4. ಹೊರ ರಾಜ್ಯ ಹಾಗೂ ದೇಶಗಳಿಗೆ ಭೇತಿ ನೀಡಿ ರಫ್ತಿನ ಬಗ್ಗೆ ರೈತರಿಗೆ ಹಾಗೂ ರಫ್ತುದಾರರಿಗೆ ಪ್ರೋತ್ಸಾಹ ನೀಡುವುದು.

ಗಾಜನೂರು ತುಂಗಾ ಮೇಲ್ದಂಡೆ ಯೋಜನೆಯ ಸಲಹಾ ಸಮಿತಿಗೆ ಶಾಸಕರನ್ನು

4658 (5200) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ (ಶಿವಮೊಗ್ಗ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಗಾಜನೂರು ತಂಗಾ ಮೇಲ್ದಂಡೆ ಯೋಜನೆ ಸಲಹಾ ಸಮಿತಿಗೆ ಶಾಸಕರನ್ನೊಳಗೊಂಡ ಸಮಿತಿ ರಚಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)

ಆ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ತುಂಗಾ ಎಡನಾಲೆ ಹಾಗೂ ಬಲನಾಲೆಗಳ ಚಾನಲ್ ರಸ್ತೆ ಕಾಮಗಾರಿಗೆ ಹಣ ಬಿಡುಗಡೆಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಚಾನಲ್‌ಗಳ ಸಿಲ್ಟ್ ತೆಗೆಯಲು ಸರ್ಕಾರದ ವತಿಯಿಂದ ಜೆ.ಸಿ.ಬಿ. ಹಾಗೂ ಕೆಲವು ಅಗತ್ಯ ಯಂತ್ರೋಪಕರಣಗಳನ್ನು ಖರೀದಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಇಲ್ಲ.

ಆ) ತುಂಗಾ ಅಚ್ಚುಕಟ್ಟು ಪ್ರದೇಶದಲ್ಲಿ 131.30 ಕಿಮೀ.ಗಳ ಆಯಕಟ್ಟು ರಸ್ತೆ ಇದ್ದು ಇವುಗಳ ನಿರ್ವಹಣೆ ಹಾಗೂ ದುರಸ್ತಿ ಕಾಮಗಾರಿಗಳಿಗೆ ರೂ. 13.00 ಲಕ್ಷ ಅನುದಾನ ಒದಗಿಸಲಾಗಿದೆ. ಕಾಮಗಾರಿಗೆ ಅವಶ್ಯವಿರುವ ಹೆಚ್ಚುವರಿ ಅನುದಾನದ ಕುರಿತು ಮುಂದಿನ ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಇರುವುದಿಲ್ಲ.

ರಾಜ್ಯದಲ್ಲಿ ಬೆಳೆ ವಿಮೆ

4659 (5364) : ಶ್ರೀ ಶ್ರೀ ಗುಡ್ಡದೇವರ ಗದ್ದಯ್ಯ ಶಿಮೂರ್ತಯ್ಯ (ಶಿರಹಟ್ಟಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ವರ್ಷದ ಮುಂಗಾರು ಹಾಗೂ ಹಿಂಗಾರು ಬೆಳೆಗಳಿಗೆ ವಿಮೆ ಮಂಜೂರಾಗಿದೆಯೇ?

ಆ) ಮಂಜೂರಾಗಿದ್ದಲ್ಲಿ, ಯಾವಾಗ ವಿತರಿಸಲಾಗುವುದು?

ಇ) ವಿಮಾ ಮಂಜೂರಾತಿ ಮಾಡುವಲ್ಲಿ ಸರ್ಕಾರ ಅನುಸರಿಸುತ್ತಿರುವ ಮಾನದಂಡವೇನು? (ವಿವರ ನೀಡುವುದು)

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) 2002ರ ಮುಂಗಾರು ಹಂಗಾಮಿನ ಆ ಬೆಳೆಗಳಾದ ಜೋಳ, ರಾಗಿ, ಸಜ್ಜೆ, ತೊಗರಿ, ಸೋಯಾ ಅವರೆ, ಉದ್ದು, ಹೆಸರು ಸೂರ್ಯಕಾಂತಿ ಮತ್ತು ಎಳ್ಳು ಇವುಗಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಿರುತ್ತದೆ. ಉಳಿದ 5 ಬೆಳೆಗಳಾದ ಭತ್ತ ಮುಸುಕಿನ ಜೋಳ, ನೆಲೆಗಡಲೆ (ಶೇಂಗಾ), ಆಲೂಗೆಡ್ಡೆ ಮತ್ತು ಈರುಳ್ಳಿ ಇವುಗಳಿಗೆ ಭಾರತೀಯ ಸಾಮಾನ್ಯ ವಿಮಾ ನಿಗಮವು ತನಿಖೆಗಾಗಿ ಅಗ್ರಿಕಲ್ಚರ್ ಫೈನಾನ್ಸ್ ಕಾರ್ಪೋರೇಷನ್ ಸಂಸ್ಥೆಗೆ ವಹಿಸಿರುತ್ತದೆ ವರದಿ ಬ ಂದ ನಂತರ